# ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ನೋಂದಾಯಿತ ಕಛೇರಿ: 4ನೇ ಮಹಡಿ, ಕಾಫಿ ಬೋರ್ಡ್ ಕಟ್ಟಡ,
ನಂ1, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001.
ದೂರವಾಣಿ: 080-22283074-78 ಫ್ಯಾಕ್ಸ್: 080-22386015
Web site: http:\\www.knnlindia.com.
CIN : U85110KA1998SGC024503

ಕನೀನಿ (ನೋಂ)/ನೇಮಕಾತಿ (ಸಿಎಸ್)/ಸಿ&ಆರ್/2021-22/2015 ದಿ: 02.08.2021

## ನೇಮಕಾತಿ ಅಧಿಸೂಚನೆ (ON CONTRACT BASIS)

ಕರ್ನಾಟಕ ನೀರಾವರಿ ನಿಗಮವು ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿದ್ದು, ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಶೀಘ್ರ ಅನುಷ್ಠಾನಕ್ಕಾಗಿ ಕಂಪನಿ ಕಾಯ್ದೆಯಡಿ ಸ್ಥಾಪಿಸಲಾಗಿದೆ. ಕರ್ನಾಟಕ ಸರ್ಕಾರವು 2001 ರಿಂದ 31.03.2021 ರವರೆಗೆ ಒಟ್ಟು 122 ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ವರ್ಗಾಯಿಸಿದ್ದು, ನಿಗಮದ ಮೂಲ ಉದ್ದೇಶವು ನೀರಾವರಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಾಗಿದ್ದು, ತನಗೆ ವಹಿಸಿದ ಯೋಜನೆಗಳ ಅನುಷ್ಠಾನ, ಕಾರ್ಯಾಚರಣೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದೆ.

ನಿಗಮದ ನೋಂದಾಯಿತ ಕಛೇರಿಯು ಬೆಂಗಳೂರು ಹಾಗೂ ಕೇಂದ್ರ ಕಛೇರಿ, ಧಾರವಾಡದಲ್ಲಿದ್ದು ಇನ್ನಿತರೆ ಅಧೀನ ಕಛೇರಿಗಳು ರಾಜ್ಯದ ವಿವಿಧ ಜಿಲ್ಲೆಗಳಲ್ಲಿವೆ. ನಿಗಮದಲ್ಲಿ ಖಾಲಿ ಇರುವ ಕಂಪನಿ ಕಾರ್ಯದರ್ಶಿ **(ಎರಡು ವರ್ಷದ ಗುತ್ತಿಗೆ ಆಧಾರದ ಮೇಲೆ)** ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಗಿನಂತಿದೆ;

| Sl. No. | Post/Qualification & Experience | Total No. of Posts |
|---|---|---|
| 1. | **Company Secretary Grade-I**<br><br>Must be Associate Member of Company Secretaries of India and law graduate, with 15 years of experience in Secretarial and legal functions as a Company Secretary in a PSU or Large Corporate Body.<br><br>**Pay Scale: (Rs.97100-141300)**<br>**OR**<br>**Company Secretary Grade-II**<br>Must be Associate Member of Company Secretaries of India and law graduate, with 10 years of experience in Secretarial and legal functions as a Company Secretary in a PSU or Large Corporate Body.<br><br>**Pay Scale: (Rs.90500 -123300)** | One |

**ನಿಯಮ ಮತ್ತು ಷರತ್ತುಗಳು:**

1. **ಹುದ್ದೆ ಮತ್ತು ವಯೋಮಿತಿ:**

(i) ಕಂಪನಿ ಕಾರ್ಯದರ್ಶಿ (Grade-I or Grade-II) ಹುದ್ದೆಗೆ ಅರ್ಹ ಅಭ್ಯರ್ಥಿಗಳು ಹೊಂದಿರುವ ಅನುಭವ ಮತ್ತು ಅರ್ಹತೆ ಆಧಾರದ ಮೇಲೆ (on contract basis) ನೇಮಕಾತಿಗೆ ಪರಿಗಣಿಸಲಾಗುವುದು.

(ii) ಅವಶ್ಯವಿದ್ದಲ್ಲಿ ಹುದ್ದೆಗೆ ಅಗತ್ಯವಿರುವ ಅರ್ಹತೆ ಮತ್ತು ಅನುಭವದ ಆಧಾರದ ಮೇಲೆ ವಯೋಮಿತಿಯಲ್ಲಿ 05 ವರ್ಷಗಳ ಸಡಿಲಿಕೆಯನ್ನು ನೀಡಲಾಗುವುದು. ಆದಾಗ್ಯೂ, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಗರಿಷ್ಠ 45 ವರ್ಷ ವಯೋಮಿತಿಯನ್ನು ಹೊಂದಿರಬೇಕು ಮತ್ತು ವಯೋಮಿತಿಗೆ ಸಂಬಂಧಿಸಿದ ಇನ್ನಿತರೆ ಅಂಶಗಳು ನಿಗಮ/ಸರ್ಕಾರದ ಅಧಿಸೂಚನೆ/ ಆದೇಶಗಳನ್ವಯ ನಿರ್ವಹಿಸಲಾಗುವುದು.

(iii) ಮೇಲಿನ (i) & (ii) ಅಂಶಗಳನ್ನು ನಿರ್ಧರಿಸಲು ಸಕ್ಷಮ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.

(iv) ಸದರಿ ಹುದ್ದೆಯು ಎರಡು ವರ್ಷದ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದು ಆದರೆ ಒಂದು ವರ್ಷದ performance ಆಧಾರದ ಮೇಲೆ 2 ವರ್ಷಕ್ಕೆ ಮುಂದುವರಿಸಲಾಗುವುದು.

2. **ಅರ್ಜಿ ಸಲ್ಲಿಕೆ:**

(i) ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ತುಂಬಿ ವ್ಯವಸ್ಥಪಕ ನಿರ್ದೇಶಕರು, ನೋಂದಾಯಿತ ಕಛೇರಿ, ಬೆಂಗಳೂರು ಇಲ್ಲಿ ಅರ್ಜಿಯನ್ನು ನೋಂದಾಯಿತ ಅಂಚೆ ಮೂಲಕ ಸಲ್ಲಿಸಬೇಕು.

(ii) ಅರ್ಜಿಗಳನ್ನು ದಿ: 03.08.2021 ರಿಂದ ಮೇಲಿನ ವಿಳಾಸಕ್ಕೆ ಸಲ್ಲಿಸಬಹುದು.

(iii) ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ 23.08.2021 ಸಂಜೆ 5.30 ಗಂಟೆಯೊಳಗೆ** ಸಲ್ಲಿಸುವುದು. ತದನಂತರದ ಸ್ವೀಕರಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(iv) ಲಕೋಟೆಯ ಮೇಲೆ ಹುದ್ದೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸುವುದು.

(v) ಅರ್ಜಿ ನಮೂನೆಯನ್ನು ನಿಗಮದ ವೆಬ್‌ಸೈಟ್ **http:\\www.knnlindia.com** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

3. **ಅರ್ಜಿ ಶುಲ್ಕ:** ಯಾವುದು ಇಲ್ಲ.

4. **ಶೈಕ್ಷಣಿಕೆ ವಿದ್ಯಾರ್ಹತೆ:**

(i) ಹುದ್ದೆಗೆ ಅಗತ್ಯವಾದ ವಿದ್ಯಾರ್ಹತೆಯನ್ನು ಕಾನೂನು ರೀತ್ಯ ಸ್ಥಾಪಿತವಾದ/ಅಂಗೀಕೃತ ಮಂಡಳಿ/ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ಸರ್ಕಾರವು ಅಂತಹ ಪರೀಕ್ಷೆಗೆ ಸಮಾನವೆಂದು ಅಂಗೀಕರಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು.

(ii) ಶೈಕ್ಷಣಿಕ ಅರ್ಹತೆಗಳು, ಅನುಭವ, ಪ್ರಶಂಸಾಪತ್ರಗಳು, ಗ್ರಾಮೀಣ ಪ್ರಮಾಣ ಪತ್ರ, ಕನ್ನಡ ಮಾಧ್ಯಮದ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ (if any) ಸ್ವಯಂ ದೃಢೀಕರಿಸಿ ಸಲ್ಲಿಸಬೇಕು.

(iii) ಅಭ್ಯರ್ಥಿಗಳು ಹಿಂದಿನ ಕೆಲಸದ ಅನುಭವದ ವಿವರಗಳನ್ನೊಳಗೊಂಡ ಟಿಪ್ಪಣಿಯನ್ನು **Resume** ನಲ್ಲಿ ಸಲ್ಲಿಸುವುದು.

5. **ಸೇವಾ ನಿರತ ಅಭ್ಯರ್ಥಿಗಳು:** ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಪ್ರಸ್ತುತ ಉದ್ಯೋಗದಾತರಿಂದ **"No Objection Certificate"** ಸಲ್ಲಿಸಬೇಕು.

6. **ಅರ್ಹತಾ ಅವಧಿ ಮತ್ತು ಸ್ಥಳನಿಯುಕ್ತಿ:**

(i) ಸಂಬಂಧಿಸಿದ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಯು ಆರು ತಿಂಗಳ ಅವಧಿಗೆ ಅರ್ಹತಾ ಪರೀಕ್ಷಾ ಅವಧಿಯಲ್ಲಿದ್ದು, ಅರ್ಹತಾ ಅವಧಿ ವಿಸ್ತರಣೆಯು ಆಡಳಿತ ಮಂಡಳಿಯ ವಿವೇಚನೆಗೆ ಒಳಪಟ್ಟಿರುತ್ತದೆ.

(ii) ನೇಮಕಗೊಂಡ ಅಭ್ಯರ್ಥಿಯು, ನೋಂದಾಯಿತ ಕಛೇರಿ, ಬೆಂಗಳೂರು ಮತ್ತು ಕೇಂದ್ರ ಕಛೇರಿ, ಧಾರವಾಡದಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರಬೇಕು.

7. **ಸಾಮಾನ್ಯ ಷರತ್ತುಗಳು:**

(i) ಭಾರತೀಯ ನಾಗರೀಕನಾಗಿರಬೇಕು.

(ii) ಕನ್ನಡದಲ್ಲಿ ವ್ಯವಹರಿಸುವುದು ಕಡ್ಡಾಯವಾಗಿದ್ದು, ಅಭ್ಯರ್ಥಿಯು ಕನ್ನಡ ಬರೆಯುವ ಮತ್ತು ಓದುವ ಜ್ಞಾನ ಅತ್ಯಗತ್ಯ.

(iii) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿ ಅರ್ಹರಾಗುವುದಿಲ್ಲ.

(iv) ಯಾವುದೇ ಸಮಯದಲ್ಲಿ ಅಭ್ಯರ್ಥಿಯು ಸುಳ್ಳು ಮಾಹಿತಿಯನ್ನು ನೀಡಿದ್ದಾನೆ ಎಂದು ಕಂಡುಬಂದಲ್ಲಿ ಅಭ್ಯರ್ಥಿಯ ಮುಂದಿನ ಹಂತಗಳಿಂದ ಅನರ್ಹಗೊಳ್ಳುತ್ತಾನೆ/ತ್ತಾಳೆ ಮತ್ತು ಸೂಕ್ತ ಕಾನೂನು ಕ್ರಮಕ್ಕೆ ಹೊಣೆಗಾರರಾಗುತ್ತಾರೆ.

(v) ಅನುಚಿತ ಮಾರ್ಗ ಅನುಸರಿಸುತ್ತಿರುವುನೆಂದು ಅಥವಾ ಅನುಸರಿಸಲು ಪ್ರಯುತ್ನಿಸುತ್ತಿರುವುನೆಂದು ಅಥವಾ ಅವರ ನೇಮಕಾತಿ ಸಂಬಂಧ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗ ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹಾರಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು

(vi) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಟಿಎ/ಡಿಎ ಪಾವತಿಸಲಾಗುವುದಿಲ್ಲ.

(vii) ಸರ್ಕಾರದ ಇಲಾಖೆ/ಸರ್ಕಾರದ ಸಾರ್ವಜನಿಕ ಉದ್ಯಮಗಳಲ್ಲಿ/ಅಂಗಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಾತಿನಿಧ್ಯ ನೀಡಲಾಗುವುದು.

(viii) ಹುದ್ದೆಗೆ canvassing ಮಾಡುವುದು ನೇಮಕಾತಿಗೆ ಅನರ್ಹವಾಗುತ್ತದೆ.

(ix) ಕಿರುಪಟ್ಟಿ ಮಾಡಿದ ಅಭ್ಯರ್ಥಿಗಳಿಗೆ (shortlisted candidates) ಅವರುಗಳಿಗೆ ಮಾತ್ರ ಸಂದರ್ಶನ ಪತ್ರವನ್ನು ಇ–ಮೇಲ್/ಅಂಚೆ/ಕೊರಿಯರ್ ಮೂಲಕ ಸಲ್ಲಿಸಲಾಗುವುದು.

(x) ನೇಮಕಾತಿಯನ್ನು ಪೂರ್ಣವಾಗಿ ಮತ್ತು ಭಾಗಶಃ ರದ್ದುಮಾಡುವ/ಮುಂದೂಡುವ/ ಬದಲಾವಣೆ ಮಾಡುವ ಹಕ್ಕನ್ನು ನಿಗಮ ಹೊಂದಿರುತ್ತದೆ.

(xi) ಅಧಿಸೂಚನೆ/ನೇಮಕಾತಿ ಸಂಬಂಧ ನಿಗಮದ ಜೊತೆಗೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

(xii) ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯು ನಿಗಮದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನಡೆಯುತ್ತಿದ್ದು, ಏನಾದರೂ ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಸದರಿ ನಿಯಮಾವಳಿ, ಕೆಸಿಎಸ್ಆರ್ ನಿಯಮ, ಸರ್ಕಾರದ ಆದೇಶ/ಅಧಿಸೂಚನೆಗಳನ್ವಯ ಕ್ರಮವನ್ನು ಕೈಗೊಳ್ಳಲಾಗುವುದು ಮತ್ತು ನಿಗಮದ ಆಡಳಿತ ಮಂಡಳಿಯ ಅಂತಿಮ ನಿರ್ಣಯಕ್ಕೆ ಒಳಪಟ್ಟಿರುತ್ತದೆ.

(xiii) ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಯು ಕನಿಷ್ಠ ಅವಧಿಗೆ ಅಥವಾ ಸಮರ್ಥ ಪ್ರಾಧಿಕಾರ ನಿರ್ಧರಿಸಿದಂತೆ ನಿಗಮಕ್ಕೆ ಸೇವೆ ಸಲ್ಲಿಸುವುದರ ಬಗ್ಗೆ ಕರ್ತವ್ಯಕ್ಕೆ ಸೇರುವ ಸಮಯದಲ್ಲಿ ಒಪ್ಪಂದವನ್ನು ಲಿಖಿತ ರೂಪದಲ್ಲಿ/ನಿಗಮವು ನಿಗದಿಪಡಿಸಿದಂತೆ ಮಾಡಿಕೊಳ್ಳಬೇಕು.

(xiv) ಈ ಅಧಿಸೂಚನೆ ಸಂಬಂಧ ಮುಂದಿನ ಬದಲಾವಣೆಗಳೇನಾದರೂ ಇದ್ದಲ್ಲಿ, ಅದನ್ನು ನಿಗಮದ ವೆಬ್‌ಸೈಟ್ **http:\\www.knnlindia.com** ನಲ್ಲಿ ಪ್ರಕಟಿಸಲಾಗುವುದು ಮತ್ತು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–

**ವ್ಯವಸ್ಥಾಪಕ ನಿರ್ದೇಶಕರು**

# APPLICATION FORMAT

## APPLICATION FOR THE POST OF ..............................................................................................

## KNNL NOTIFICATION NO. & DATE ..............................................................................................

Affix your recent passport size photo

1. NAME: ..............................................................................................................................................

2. FATHER NAME: ................................................................................................................................

3. ADDRESS: A) PERMANENT ADDRESS: ..........................................................................................

..............................................................................................................................................

B) POSTAL ADDRESS: ..........................................................................................................

..............................................................................................................................................

C) CONTACT NO: (M)............................................................. (L) ..........................................

D) E-MAIL ID: ......................................................................................................................

4. AGE & DATE OF BIRTH: ....................................................................................................................

5. CASTE: ..............................................................................................................................................

5. LANGUAGES KNOWN: .......................................................................................................................

6. EDUCATIONAL QUALIFICATION: .........................................................................................................

| SL. NO. | EXAMINATION PASSED | INSTITUTION/UNIVERSITY | % MARKS | YEAR OF PASSING |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| 5 | | | | |

7. TECHNICAL / OTHER QUALIFICATION:

| SL. NO. | TECHNICAL QUALIFICATION | INSTITUTION | YEAR OF PASSING |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |
| 7 | | | |
| 8 | | | |
| 9 | | | |
| 10 | | | |

8. NO. OF YEARS EXPERIECNE WITH DETAILD NATURE OF WORK TO BE ENCLOSED:

| SL. NO. | ORGANISATION | POSITION HELD | YEAR | |
|---|---|---|---|---|
| | | | FROM | TO |
| 1 | | | | |
| 2 | | | | |
| 3 | | | | |
| 4 | | | | |
| 5 | | | | |
| 6 | | | | |
| 7 | | | | |
| 8 | | | | |
| 9 | | | | |
| 10 | | | | |

9. CERTIFICATES TO BE ENCLOSED FOR THE FOLLOWING:

i. QUALIFICATION INCLUDING TECHNICAL / OTHER (if any)
ii. EXPERIENCE
iii. CASTE
iv. KANNADA MEDIUM
v. RURAL CANDIDATE
vi. EX-SERVICEMEN
vii. OTHER

(SIGNATURE)

PLACE:

DATE: